ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**

**ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(4)ಅ.ಆ.ನೇ.ಕೌ–05/2019–20 ದಿನಾಂಕ :27–01–2020

**: ಅಧಿಸೂಚನೆ :**

ವಿಷಯ: ಅನುಕಂಪದ ಆಧಾರದ ಮೇರೆಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿ ನೀಡುವ ಬಗ್ಗೆ.

ಉಲ್ಲೇಖ :ಸರ್ಕಾರದ ಅಧಿಸೂಚನೆ ಸಂ:ಡಿಪಿಎಆರ್:100:ಎಸ್‌ಸಿಎ:95, ದಿನಾಂಕ. 12/09/1996

2] ಸರ್ಕಾರದ ಅಧಿಸೂಚನೆ ಸಂ:ಡಿಪಿಎಆರ್:11:ಎಸ್‌ಸಿಎ:97, ದಿನಾಂಕ. 31/03/1999 ಹಾಗೂ ನಂತರದ ತಿದ್ದುಪಡಿಗಳು.

3] ಸಾರ್ವಜನಿಕ ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕರು ಹಾಗೂ ಬೆಂಗಳೂರು ವಿಭಾಗದ ಜಿಲ್ಲಾ ಉಪ ನಿರ್ದೇಶಕರುಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳು.

4) Contributory Pension ಬಗೆಗಿನ ಸರ್ಕಾರದ ಆದೇಶ ಸಂ:ಎಫ್‌ಡಿ[ಎಸ್‌ಪಿಎಲ್] 28:ಪಿಇಎನ್:2009, ದಿನಾಂಕ:19/01/2010.

5] ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 43 ಸೇವನೆ 2008, ದಿನಾಂಕ:07/03/2012. ( ಕಂಪ್ಯೂಟರ್ ಸಾಕ್ಷರತೆ ಕುರಿತು).

6) ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 55 ಸೇಅನೇ 2012 ದಿನಾಂಕ : 11/07/2012.

7) ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 59 ಎಸ್‌ಸಿಆರ್ 2012 ದಿನಾಂಕ : 07/07/2012. ( ಕಂಪ್ಯೂಟರ್ ಸಾಕ್ಷರತೆ ಕುರಿತು).

8) ಸರ್ಕಾರದ ಅಧಿಸೂಚನೆ ಸಂಖ್ಯೆ :ಡಿಪಿಎಆರ್ 154 ಎಸ್‌ಸಿಆರ್ 2014 ದಿನಾಂಕ : 27/04/2015. ( ಕಂಪ್ಯೂಟರ್ ಸಾಕ್ಷರತೆ ಕುರಿತು).

******

ಸಾರ್ವಜನಿಕ ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕರು ಹಾಗೂ ಬೆಂಗಳೂರು ವಿಭಾಗದ ಜಿಲ್ಲಾ ಉಪ ನಿರ್ದೇಶಕರುಗಳಿಂದ ಅನುಕಂಪದ ಆಧಾರದ ಮೇರೆಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿಯನ್ನು ನೀಡುವ ಬಗ್ಗೆ ಸ್ವೀಕೃತವಾದ ಪ್ರಸ್ತಾವನೆಗಳನ್ನು ಉಲ್ಲೇಖಿತ (1), (2) ಮತ್ತು (6) ರ ಸರ್ಕಾರದ ಅಧಿಸೂಚನೆ ಹಾಗೂ ಆದೇಶಗಳನ್ವಯ ಪರಿಶೀಲಿಸಲಾಗಿ ಅರ್ಜಿದಾರರು ಅನುಕಂಪದ ಆಧಾರದ ಮೇರೆಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಅರ್ಹರೆಂದು ಪರಿಗಣಿಸಿದೆ.

2) ಈ ರೀತಿ ಅರ್ಹರೆಂದು ಪರಿಗಣಿಸಿರುವ ಅಭ್ಯರ್ಥಿಗಳಿಗೆ ಖಾಲಿ ಹುದ್ದೆಗಳ ಲಭ್ಯತೆಯ ಆಧಾರ ಮತ್ತು ಆದ್ಯತೆಯ ಮೇರೆಗೆ ಸ್ಥಳ ಆಯ್ಕೆ ಪ್ರಕ್ರಿಯೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಕಛೇರಿಯಲ್ಲಿ **ದಿನಾಂಕ : 18/01/2020** ರಂದು ನಡೆಸಲಾಗಿರುತ್ತದೆ. ಸದರಿ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಅರ್ಜಿದಾರರುಗಳು ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

3) **ದಿನಾಂಕ : 18/01/2020** ರಂದು ನಡೆದ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಹಾಜರಾದ ಈ ಕೆಳಕಂಡ ಅಭ್ಯರ್ಥಿಗಳು ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಸದರಿ ಅಭ್ಯರ್ಥಿಗಳಿಗೆ ಈ ಕೆಳಗೆ ವಿಧಿಸಿರುವ ಷರತ್ತುಗಳನ್ವಯ ರೂ. 27650–52650 ವೇತನ ಶ್ರೇಣಿಯ **ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ** ಅನುಕಂಪದ ಆಧಾರದ ಮೇರೆಗೆ ನೇಮಕಾತಿ ನೀಡಿ ಅವರ ಹೆಸರಿನ ಮುಂದೆ ಸೂಚಿಸಿರುವ ಸ್ಥಳಕ್ಕೆ ನಿಯುಕ್ತಿಗೊಳಿಸಲಾಗಿದೆ. ನೇಮಕಾತಿ ಹೊಂದಿರುವ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾದ ನಂತರ, ಸಂಬಂಧಿಸಿದ ಅಭ್ಯರ್ಥಿಗಳ ಹಾಜರಾತಿ ವರದಿಯನ್ನು ಸಂಬಂಧಿಸಿದ ಕಛೇರಿಯ ಮುಖ್ಯಸ್ಥರು ಈ ಕಛೇರಿಗೆ ತಪ್ಪದೇ ಕಳುಹಿಸುವುದು. **ಬೆಂಗಳೂರು ವಿಭಾಗದ ವ್ಯಾಪ್ತಿಗೆ ಸಂಬಂಧಿಸಿದ ಅಭ್ಯರ್ಥಿಗಳ ಪ್ರಥಮ ವೇತನ ಪ್ರಮಾಣ ಪತ್ರವನ್ನು**

**ಪಡೆಯುವ ಸಲುವಾಗಿ** ಸೂಕ್ತ ಪ್ರಸ್ತಾವನೆಯನ್ನು **ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ** ಸಲ್ಲಿಸುವುದು.

4) ಮೈಸೂರು ವಿಭಾಗದಡಿಯಲ್ಲಿ ನೇಮಕಾತಿ ಹೊಂದಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಕಛೇರಿ ಮುಖ್ಯಸ್ಥರಿಂದ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾದ ಬಗ್ಗೆ ವರದಿ ಸ್ವೀಕೃತವಾದ ಕೂಡಲೇ ನಿಯಮಾನುಸಾರ ಪರಿಶೀಲಿಸಿ **ಪ್ರಥಮ ವೇತನ ಪ್ರಮಾಣ ಪತ್ರವನ್ನು** ನೀಡುವಂತೆ **ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು** ಇವರಿಗೆ ಸೂಚಿಸಲಾಗಿದೆ.

| ಕ್ರ.ಸಂ. | ಮೃತ ಸರ್ಕಾರಿ ನೌಕರರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿದ್ದ ಕಛೇರಿ/ಶಾಲಾ ವಿಳಾಸ | ಅರ್ಜಿದಾರರ ಹೆಸರು ಮತ್ತು ವಿಳಾಸ | ಮೃತ ನೌಕರರೊಂದಿಗಿನ ಅರ್ಜಿದಾರರ ಸಂಬಂಧ | ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಂತೆ ನೇಮಕಾತಿ ಮಾಡಿರುವ ಕಛೇರಿ/ಶಾಲಾ ವಿಳಾಸ |
|---|---|---|---|---|
| 1 | ದಿ॥ ನಾಗರಾಜು ಪಿ.ಆರ್. ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಅಲ್ಲೀಪುರ, ಗೌರಿಬಿದನೂರು ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ | ಶ್ರೀಮತಿ ಕಮಲಮ್ಮ ಡಿ. ಪತಿ ದಿ॥ ನಾಗರಾಜು ಪಿ.ಆರ್. ಪೋಲೇನಹಳ್ಳಿ-572129, ದೊಡ್ಡಸಾಗೆರೆ ಅಂಚೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ | ಪತ್ನಿ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ |
| 2 | ದಿ॥ ಹೆಚ್.ಎಸ್.ಕೃಷ್ಣಯ್ಯ, ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಂಪಿಗೆ ಹೊಸಹಳ್ಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ | ಕು. ವಾಣಿ.ಕೆ. ತಂದೆ ದಿ॥ ಹೆಚ್.ಎಸ್.ಕೃಷ್ಣಯ್ಯ, ಅಕ್ಕಳಸಂದ್ರ ಗೊಲ್ಲರಹಟ್ಟಿ, ದೊಂಬರನಹಳ್ಳಿ ಅಂಚೆ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ | ಮಗಳು | ಸರ್ಕಾರಿ ಪ್ರೌಢ ಶಾಲೆ ಅಮ್ಮನಘಟ್ಟ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ |
| 3 | ದಿ॥ ನಾಗರಾಜ, ಸಹಶಿಕ್ಷಕರು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬಿ.ಕಾಳೇನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ | ಶ್ರೀ ಎನ್.ಎನ್. ಸುನಿಲ್ ಕುಮಾರ್ ತಂದೆ ದಿ॥ ನಾಗರಾಜ ನೆಟ್ಟೇಕೆರೆ ಗ್ರಾಮ, ಚೌಳಗಾಲ ಅಂಚೆ, ದಂಡಿಗನ ಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ | ಮಗ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-03, ಬೆಂಗಳೂರು ಉತ್ತರ ಜಿಲ್ಲೆ |
| 4 | ದಿ॥ ಎಂ.ಆಂಜಿನಪ್ಪ, ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಾಗಮಂಗಲ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ | ಶ್ರೀ ಮದನ್ ಎಂ.ಎ. ಪತಿ ದಿ॥ ಎಂ.ಆಂಜಿನಪ್ಪ, ಮೇಲೂರು ಗ್ರಾಮ ಮತ್ತು ಅಂಚೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ | ಮಗ | ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ |

**ಷರತ್ತುಗಳು:**

1. ಅಭ್ಯರ್ಥಿಯು ಸಾಮಾನ್ಯ ನೇಮಕಾತಿ ನಿಯಮದ ಪ್ರಕಾರ ನಿಗದಿತ ವಯೋಮಿತಿಯಲ್ಲಿರಬೇಕು.
2. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ನಿಗದಿಪಡಿಸಿರುವಂತೆ ವಿದ್ಯಾರ್ಹತೆಯನ್ನು ಹೊಂದಿರಬೇಕು.
3. ಅಭ್ಯರ್ಥಿಯ ವಿದ್ಯಾರ್ಹತೆಯ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸಿಕೊಳ್ಳತಕ್ಕದ್ದು.
4. ಅಭ್ಯರ್ಥಿಗೆ ನೇಮಕ ಮಾಡಿರುವ ಸಂಸ್ಥೆಯ ಸಂಕ್ಷಿಪ್ತ ವಿವರಗಳನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಕ್ಕೆ ಸರ್ಕಾರದ ಆದೇಶ ಸಂಖ್ಯೆ:ಜಿಎಡಿ: 50: ಎಸ್‌ಆರ್‌ಎಸ್:75, ದಿನಾಂಕ:25.09.1975 ರಂತೆ ತಿಳಿಸುವುದು ಹಾಗೂ ಮೂಲ ನೋಂದಣಿ ಪ್ರಮಾಣ ಪತ್ರವನ್ನು ಅವರಿಗೆ ಸಲ್ಲಿಸುವುದು.
5. ನೇಮಕಗೊಂಡ ಅಭ್ಯರ್ಥಿಗೆ ಎರಡು ವರ್ಷಗಳ ಖಾಯಂ ಪೂರ್ವ ಸೇವಾ ಅವಧಿ ಇರುತ್ತದೆ. ಈ ಅವಧಿಯಲ್ಲಿ ಅಭ್ಯರ್ಥಿಯು ಸೇವೆಗೆ ಅನರ್ಹರೆಂದು ಕಂಡು ಬಂದಲ್ಲಿ ಸೇವೆಯಿಂದ ಬಿಡುಗಡೆ ಮಾಡಬಹುದಾಗಿದೆ. ಈ ಅವಧಿಯಲ್ಲಿ ನಿಗದಿತ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡತಕ್ಕದ್ದು.
6. ಅಭ್ಯರ್ಥಿಯು ನೇಮಕಾತಿಯಾದ ನಂತರ, ಸರ್ಕಾರಿ ನೌಕರರಿಗೆ ಅನ್ವಯಿಸುವ ಎಲ್ಲಾ ನಿಯಮಗಳು ಇವರಿಗೂ ಅನ್ವಯವಾಗುತ್ತದೆ.
7. ಅಭ್ಯರ್ಥಿಯು ನೇಮಕಾತಿ ಹೊಂದಿದ ಸ್ಥಳದಲ್ಲಿ ಹದಿನೈದು ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.
8. ಅಭ್ಯರ್ಥಿಯ ಸೇವಾ ಜೇಷ್ಠತೆಯನ್ನು ಇವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪರಿಗಣಿಸತಕ್ಕದ್ದು.
9. ಅಭ್ಯರ್ಥಿಯ ಸೇವೆಯನ್ನು ಸಾಮಾನ್ಯ ನೇಮಕಾತಿ ನಿಯಮಗಳ ಅಧಿವ್ಯಾಪ್ತಿಯಲ್ಲಿ ಪರಿಗಣಿಸಿ ಮುಂದುವರಿಸತಕ್ಕದ್ದು.
10. ಮೂಲತಃ ಪ್ರಸ್ತಾವನೆಯನ್ನು ಕಳುಹಿಸಲಾದ ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸಿ ಕಳುಹಿಸಲಾದ ಅಭ್ಯರ್ಥಿಯ ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರಗಳ ಪೈಕಿ ಒಂದನ್ನು ಅನುಕಂಪದ ಆಧಾರದ ಮೇರೆಗೆ ನೇಮಕಾತಿ ರಿಜಿಸ್ಟರಿನಲ್ಲಿ ಅಂಟಿಸತಕ್ಕದ್ದು. ಮತ್ತೊಂದು ಭಾವ ಚಿತ್ರವನ್ನು ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಂಸ್ಥೆಯ ಮುಖ್ಯಸ್ಥರಿಗೆ ಕಳುಹಿಸಿ ಅಭ್ಯರ್ಥಿಯ ಸೇವಾ ಪುಸ್ತಕದಲ್ಲಿ ಅಂಟಿಸಲು ತಿಳಿಸುವುದು.
11. ಅನುಕಂಪದ ಆಧಾರದ ಮೇರೆಗೆ ನೇಮಕ ನೀಡುವ ಬಗೆಗಿನ ಸರ್ಕಾರಿ ಆದೇಶದಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಅಭ್ಯರ್ಥಿಯು ಪೂರೈಸಿರಬೇಕು.
12. ಅಭ್ಯರ್ಥಿಯು, ಅರ್ಜಿಯಲ್ಲಿ ಯಾವುದೇ ತಪ್ಪು ಮಾಹಿತಿ / ದಾಖಲೆಗಳನ್ನು ನೀಡಿ ನೇಮಕಾತಿ ಪಡೆದಿದ್ದಲ್ಲಿ ಅಭ್ಯರ್ಥಿಗೆ ಯಾವ ಮುನ್ಸೂಚನೆಯು ಇಲ್ಲದೆ ನೇಮಕಾತಿಯನ್ನು ರದ್ದುಪಡಿಸಲಾಗುವುದು.
13. ಮೈಸೂರು ವಿಭಾಗಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ಎಲ್ಲಾ ಮೂಲ ದಾಖಲಾತಿ ಪತ್ರಗಳು ಹಾಗೂ ಸಂಬಂಧಪಟ್ಟ ಎಲ್ಲಾ ಪೂರಕ ದಾಖಲೆಗಳ ನೈಜತೆ ಬಗ್ಗೆ ಪರಿಶೀಲಿಸಿ, ದೃಢೀಕರಿಸಿಕೊಂಡು ಜಂಟಿ ನಿರ್ದೇಶಕರು ಪ್ರಥಮ ವೇತನ ಪ್ರಮಾಣ ಪತ್ರವನ್ನು ನೀಡುವುದು.
14. ಸರ್ಕಾರದ ಉಲ್ಲೇಖ [4]ರ ಆದೇಶದಂತೆ ಕಾಂಟ್ರಿಬ್ಯೂಟರಿ ಪೆನ್ಷನ್ ಬಗೆಗೆ ಸೂಕ್ತ ಕ್ರಮ ವಹಿಸುವುದು.
15. ನೇಮಕಾತಿ ಆದೇಶದ ವಿವರಗಳನ್ನು ಮೃತ ನೌಕರರ ಸೇವಾವಹಿಯಲ್ಲಿ ದಾಖಲಿಸಿ ದೃಢೀಕರಿಸುವುದು.
16. ಉಲ್ಲೇಖ [5], [7] ಮತ್ತು [8]ರ ಸರ್ಕಾರದ ಅಧಿಸೂಚನೆಗಳಂತೆ ಸರ್ಕಾರವು ನಿಗದಿಪಡಿಸಿರುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಅಭ್ಯರ್ಥಿಯು ಪಾಸು ಮಾಡತಕ್ಕದ್ದು. ಇಲ್ಲವಾದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.
17. ಅಭ್ಯರ್ಥಿಯು ಸೇವೆಗೆ ಸೇರಿದ ಒಂದು ವರ್ಷದೊಳಗೆ ಅಥವಾ ಸೇವೆಗೆ ಸೇರಿದ ದಿನಾಂಕದ ನಂತರ ಮುಗಿಯುವ ಆರ್ಥಿಕ ಸಾಲಿನ ಅಂತ್ಯಕ್ಕೆ ಕಛೇರಿಯ ಮುಖ್ಯಸ್ಥರಿಗೆ ಆಸ್ತಿ ಮತ್ತು ಋಣ ಪಟ್ಟಿಯನ್ನು ತಪ್ಪದೆ ಸಲ್ಲಿಸುವುದು.

**(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

(ಅರುಳ್ ಕುಮಾರ್)
ಜಂಟಿ ನಿರ್ದೇಶಕರು(ಆಡಳಿತ)

ಇವರಿಗೆ:

1. ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರಿಗೆ ಮೈಸೂರು ವಿಭಾಗದಡಿಯಲ್ಲಿ ನೇಮಕಾತಿಗೊಂಡ ಅಭ್ಯರ್ಥಿಗಳ ಮೂಲ ಪ್ರಸ್ತಾವನೆ ಹಾಗೂ ದಿವಂಗತ ಸರ್ಕಾರಿ ನೌಕರರ ಸೇವಾ ಪುಸ್ತಕದೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

2. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, _ _ _ _ _ _ — _ _ _ _ ಜಿಲ್ಲೆ ಇವರಿಗೆ ಶ್ರೀಮತಿ / ಶ್ರೀ / ಕುಮಾರಿ ____________ ಇವರಿಗೆ ಅನುಕಂಪದ ಆಧಾರದ ಮೇರೆಗೆ ನೇಮಕಾತಿಗಾಗಿ ಉಲ್ಲೇಖ [3]ರ ಪ್ರಕಾರ ಜಂಟಿ ನಿರ್ದೇಶಕರು, ಮೈಸೂರು ವಿಭಾಗ ಮತ್ತು ಬೆಂಗಳೂರು ವಿಭಾಗದ ಜಿಲ್ಲಾ ಉಪ ನಿರ್ದೇಶಕರು ಈ ಕಛೇರಿಗೆ ಕಳುಹಿಸಿದ್ದ ದಿವಂಗತರ ಸೇವಾ ಪುಸ್ತಕವನ್ನು ಒಳಗೊಂಡ ಮೂಲ ಪ್ರಸ್ತಾವನೆಯನ್ನು ಮತ್ತು ಎಲ್ಲಾ ಮೂಲ ದಾಖಲೆಗಳನ್ನು ಯಥಾವತ್ತಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ. ಅಭ್ಯರ್ಥಿಯ ನೇಮಕಾತಿಯ ವಿವರವನ್ನು ದಿವಂಗತ ಸರ್ಕಾರಿ ನೌಕರರ ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು. ದಿವಂಗತ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ದಿವಂಗತ ಸರ್ಕಾರಿ ನೌಕರರ ಸೇವಾ ಪುಸ್ತಕವನ್ನು ಕಳುಹಿಸಲು ತಿಳಿಸಿದೆ.
3. ಪ್ರಸ್ತಾವನೆಯನ್ನು ಸಲ್ಲಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ ಮಾಹಿತಿಗಾಗಿ.
4. ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
5. ಅಭ್ಯರ್ಥಿಯನ್ನು ನೇಮಕ ಮಾಡಿರುವ ಸಂಬಂಧಿಸಿದ ಕಛೇರಿ / ಸಂಸ್ಥೆಯ ಮುಖ್ಯಸ್ಥರಿಗೆ
6. ಸಂಬಂಧಿಸಿದ ಅಭ್ಯರ್ಥಿಗೆ.
7. ಕಛೇರಿ ಪ್ರತಿ.
8. ಈ ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್ ವಿಳಾಸ www.schooleducation.kar.nic.in ರಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(4)ಅ.ಆ.ನೇ.ಕೌ.–05/2019–20 ದಿನಾಂಕ :27–01–2020

## : ಅಧಿಸೂಚನೆ :

**ವಿಷಯ**: ಅನುಕಂಪದ ಆಧಾರದ ಮೇರೆಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿ ನೀಡುವ ಬಗ್ಗೆ.

**ಉಲ್ಲೇಖ** : ಸರ್ಕಾರದ ಅಧಿಸೂಚನೆ ಸಂ:ಡಿಪಿಎಆರ್:100:ಎಸ್‌ಸಿಎ:95, ದಿ॥ 12/09/1996.

2] ಸರ್ಕಾರದ ಅಧಿಸೂಚನೆ ಸಂ:ಡಿಪಿಎಆರ್:11:ಎಸ್‌ಸಿಎ:97, ದಿ॥ 31/03/1999 ಹಾಗೂ ನಂತರದ ತಿದ್ದುಪಡಿಗಳು.

3] ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳು.

4) Contributory Pension ಬಗೆಗಿನ ಸರ್ಕಾರದ ಆದೇಶ ಸಂ:ಎಫ್‌ಡಿ[ಎಸ್‌ಪಿಎಲ್] 28:ಪಿಇಎನ್:2009, ದಿನಾಂಕ:19/01/2010.

5] ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 43 ಸೇವನೆ 2008, ದಿನಾಂಕ:07/03/2012. ( ಕಂಪ್ಯೂಟರ್ ಸಾಕ್ಷರತೆ ಕುರಿತು).

6) ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 55 ಸೇಅನೇ 2012 ದಿನಾಂಕ : 11/07/2012.

7) ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 59 ಎಸ್‌ಸಿಆರ್ 2012 ದಿನಾಂಕ : 07/07/2012. ( ಕಂಪ್ಯೂಟರ್ ಸಾಕ್ಷರತೆ ಕುರಿತು).

8) ಸರ್ಕಾರದ ಅಧಿಸೂಚನೆ ಸಂಖ್ಯೆ :ಡಿಪಿಎಆರ್ 154 ಎಸ್‌ಸಿಆರ್ 2014 ದಿನಾಂಕ : 27/04/2015. ( ಕಂಪ್ಯೂಟರ್ ಸಾಕ್ಷರತೆ ಕುರಿತು).

ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳಿಂದ ಅನುಕಂಪದ ಆಧಾರದ ಮೇರೆಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿಯನ್ನು ನೀಡುವ ಬಗ್ಗೆ ಸ್ವೀಕೃತವಾದ ಪ್ರಸ್ತಾವನೆಗಳನ್ನು ಉಲ್ಲೇಖಿತ (1), (2) ಮತ್ತು (6) ರ ಸರ್ಕಾರದ ಅಧಿಸೂಚನೆ ಹಾಗೂ ಆದೇಶಗಳನ್ವಯ ಪರಿಶೀಲಿಸಲಾಗಿ ಅರ್ಜಿದಾರರು ಅನುಕಂಪದ ಆಧಾರದ ಮೇರೆಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಅರ್ಹರೆಂದು ಪರಿಗಣಿಸಿದೆ.

2) ಈ ರೀತಿ ಅರ್ಹರೆಂದು ಪರಿಗಣಿಸಿರುವ ಅಭ್ಯರ್ಥಿಗಳಿಗೆ ಖಾಲಿ ಹುದ್ದೆಗಳ ಲಭ್ಯತೆಯ ಆಧಾರ ಮತ್ತು ಆದ್ಯತೆಯ ಮೇರೆಗೆ ಸ್ಥಳ ಆಯ್ಕೆ ಪ್ರಕ್ರಿಯೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಕಛೇರಿಯಿಂದ **ದಿನಾಂಕ : 18/01/2020** ರಂದು ನಡೆಸಲಾಗಿರುತ್ತದೆ. ಸದರಿ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಅರ್ಜಿದಾರರು ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

3) ದಿನಾಂಕ : 18/**01/2020** ರಂದು ನಡೆದ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಹಾಜರಾದ ಈ ಕೆಳಕಂಡ ಅಭ್ಯರ್ಥಿಗಳು ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಸದರಿ ಅಭ್ಯರ್ಥಿಗಳಿಗೆ ಈ ಕೆಳಗೆ ವಿಧಿಸಿರುವ ಷರತ್ತುಗಳನ್ವಯ ರೂ. 21400–42000 ವೇತನ ಶ್ರೇಣಿಯ **ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ** ನೇಮಕಾತಿ ನೀಡಿ ಅವರ ಹೆಸರಿನ ಮುಂದೆ ಸೂಚಿಸಿರುವ ಸ್ಥಳಕ್ಕೆ ನಿಯುಕ್ತಿಗೊಳಿಸಿದೆ. ನೇಮಕಾತಿ ಹೊಂದಿರುವ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಸಂಬಂಧಿಸಿದ ಕಛೇರಿಯ ಮುಖ್ಯಸ್ಥರು ಕೂಡಲೇ **ಈ ಕಛೇರಿಗೆ ಹಾಗೂ ಸಂಬಂದಿಸಿದ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ವರದಿ ಮಾಡಲು ತಿಳಿಸಿದೆ.** ಅಭ್ಯರ್ಥಿಗಳು ನೇಮಕಾತಿ ಹೊಂದಿದ ಸ್ಥಳಕ್ಕೆ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಕಛೇರಿ ಮುಖ್ಯಸ್ಥರಿಂದ ಹಾಜರಾತಿ ವರದಿಯು ಸ್ವೀಕೃತವಾದ ಕೂಡಲೇ ನಿಯಮಾನುಸಾರ **ಪ್ರಥಮ ವೇತನ ಪ್ರಮಾಣ ಪತ್ರವನ್ನು ನೀಡುವಂತೆ ಸಂಬಂಧಿಸಿದ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ** ಸೂಚಿಸಲಾಗಿದೆ.

| ಕ್ರ.ಸಂ. | ಮೃತ ಸರ್ಕಾರಿ ನೌಕರರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿದ್ದ ಕಛೇರಿ/ಶಾಲಾ ವಿಳಾಸ | ಅರ್ಜಿದಾರರ ಹೆಸರು ಮತ್ತು ವಿಳಾಸ | ಮೃತ ನೌಕರರೊಂದಿಗಿನ ಅರ್ಜಿದಾರರ ಸಂಬಂಧ | ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಂತೆ ನೇಮಕಾತಿ ಮಾಡಿರುವ ಕಛೇರಿ/ಶಾಲಾ ವಿಳಾಸ |
|---|---|---|---|---|
| 1 | ದಿ॥ ಕರಿಬಸವರೆಡ್ಡಿ ಜಿ.ಬಿ. ಮುಖ್ಯಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಚ್ಚಬೋರನಹಟ್ಟಿ, ಚಿತ್ರದುರ್ಗ ತಾಲೂಕು ಮತ್ತು ಜಿಲ್ಲೆ | ಶ್ರೀಮತಿ ಪಿ.ಎಸ್ ಸುನಿತ ಪತಿ ದಿ॥ ಕರಿಬಸವರೆಡ್ಡಿ ಜಿ.ಬಿ. ಅರುಣ ನಿಲಯ, 6ನೇ ಕ್ರಾಸ್, ಮುನ್ಸಿಪಲ್ ಕಾಲೋನಿ, ಗಗನ ಮೈದಾನ ಹತ್ತಿರ, ಕೆಳಗೋಟೆ, ಚಿತ್ರದುರ್ಗ-577501 | ಪತ್ನಿ | ಕರ್ನಾಟಕ ಪಬ್ಲಿಕ್ ಶಾಲೆ, ಮಾಯಕೊಂಡ, ದಾವಣಗೆರೆ ದಕ್ಷಿಣ ತಾಲ್ಲೂಕು, ದಾವಣಗೆರೆ ಜಿಲ್ಲೆ. |
| 2 | ದಿ॥ ಭೀಮೇಶ್ ಹೆಚ್.ಎಸ್. ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಬಿಸಲವಾಡಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ | ಶ್ರೀಮತಿ ಕುಸುಮ ಬಿನ್ ವೆಂಕಟರಮಣಶೆಟ್ಟಿ, ಚಂದಕವಾಡಿ ಗ್ರಾಮ ಮತ್ತು ಅಂಚೆ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ | ಪತ್ನಿ | ಸರ್ಕಾರಿ ಪ್ರೌಢಶಾಲೆ, ಮಾರಹಳ್ಳಿ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ |
| 3 | ದಿ॥ ಜೆ.ನಾಗರಾಜಬಾಬು, ಡಿ ದರ್ಜೆ ನೌಕರರು, ಎಸ್.ಎಸ್.ಇ.ಎ ಸರ್ಕಾರಿ ಪ್ರೌಢಶಾಲೆ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ | ಶ್ರೀಮತಿ ಚಂದನ ಎಲ್.ಎ ಪತಿ ದಿ॥ ಜೆ.ನಾಗರಾಜಬಾಬು, ನಂ.251/22, ರಿಲಯನ್ಸ್ ಪೆಟ್ರೋಲ್ ಬಂಕ್ ಮುಂಬಾಗ, ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ಲೋರ್ ಮಿಲ್ ರಸ್ತೆ, ಮಾದವ ನಗರ, ಗೌರಬಿದನೂರು ಟೌನ್, ಚಿಕ್ಕಬಳ್ಳಾಪುರ ಜಿಲ್ಲೆ | ಪತ್ನಿ | ಸರ್ಕಾರಿ ಪ್ರೌಢ ಶಾಲೆ, ಕಟ್ಟಾಯ, ಹಾಸನ ತಾಲ್ಲೂಕು ಮತ್ತು ಜಿಲ್ಲೆ |
| 4 | ದಿ॥ ಎಂ.ಡಿ.ರಾಚಪ್ಪ, ಸಹಶಿಕ್ಷಕರು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಳೇಕೆರೆ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ | ಶ್ರೀ ದಲಿತೇಶ್ ತಂದೆ ದಿ॥ ಎಂ.ಡಿ.ರಾಚಪ್ಪ, ಭಾಗ್ಯಜ್ಯೋತಿನಗರ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ | ಮಗ | ಸರ್ಕಾರಿ ಪ್ರೌಢ ಶಾಲೆ, ಹುಣಸೆಕಟ್ಟೆ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |

**ಷರತ್ತುಗಳು :-**

1. ಅಭ್ಯರ್ಥಿಯು ಸಾಮಾನ್ಯ ನೇಮಕಾತಿ ನಿಯಮದ ಪ್ರಕಾರ ನಿಗದಿತ ವಯೋಮಿತಿಯಲ್ಲಿರಬೇಕು.
2. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನಿಗದಿಪಡಿಸಿರುವಂತೆ ವಿದ್ಯಾರ್ಹತೆಯನ್ನು ಹೊಂದಿರಬೇಕು.
3. ಅಭ್ಯರ್ಥಿಯ ವಿದ್ಯಾರ್ಹತೆಯ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸಿಕೊಳ್ಳತಕ್ಕದ್ದು.
4. ಅಭ್ಯರ್ಥಿಗೆ ನೇಮಕ ಮಾಡಿರುವ ಸಂಸ್ಥೆಯ ಸಂಕ್ಷಿಪ್ತ ವಿವರಗಳನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಕ್ಕೆ ಸರ್ಕಾರದ ಆದೇಶ ಸಂಖ್ಯೆ:ಜಿಎಡಿ:50: ಎಸ್‌ಆರ್‌ಎಸ್:75, ದಿನಾಂಕ:25.09.1975 ರಂತೆ ತಿಳಿಸುವುದು ಹಾಗೂ ಮೂಲ ನೊಂದಣಿ ಪ್ರಮಾಣ ಪತ್ರವನ್ನು ಅವರಿಗೆ ಸಲ್ಲಿಸುವುದು.
5. ನೇಮಕಗೊಂಡ ಅಭ್ಯರ್ಥಿಗೆ ಎರಡು ವರ್ಷಗಳ ಖಾಯಂ ಪೂರ್ವ ಸೇವಾ ಅವಧಿ ಇರುತ್ತದೆ. ಈ ಅವಧಿಯಲ್ಲಿ ಅಭ್ಯರ್ಥಿಯು ಸೇವೆಗೆ ಅನರ್ಹರೆಂದು ಕಂಡು ಬಂದಲ್ಲಿ ಸೇವೆಯಿಂದ ಬಿಡುಗಡೆ ಮಾಡಬಹುದಾಗಿದೆ. ಈ ಅವಧಿಯಲ್ಲಿ ನಿಗದಿತ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡತಕ್ಕದ್ದು.
6. ಅಭ್ಯರ್ಥಿಯು ನೇಮಕಾತಿಯಾದ ನಂತರ, ಸರ್ಕಾರಿ ನೌಕರರಿಗೆ ಅನ್ವಯಿಸುವ ಎಲ್ಲಾ ನಿಯಮಗಳು ಇವರಿಗೂ ಅನ್ವಯವಾಗುತ್ತದೆ.
7. ಅಭ್ಯರ್ಥಿಯು ನೇಮಕಾತಿ ಹೊಂದಿದ ಸ್ಥಳದಲ್ಲಿ ಹದಿನೈದು ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

8. ಅಭ್ಯರ್ಥಿಯ ಸೇವಾ ಜೇಷ್ಠತೆಯನ್ನು ಇವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪರಿಗಣಿಸತಕ್ಕದ್ದು.
9. ಅಭ್ಯರ್ಥಿಯ ಸೇವೆಯನ್ನು ಸಾಮಾನ್ಯ ನೇಮಕಾತಿ ನಿಯಮಗಳ ಅಧಿವ್ಯಾಪ್ತಿಯಲ್ಲಿ ಪರಿಗಣಿಸಿ ಮುಂದುವರಿಸತಕ್ಕದ್ದು.
10. ಮೂಲತಃ ಪ್ರಸ್ತಾವನೆಯನ್ನು ಕಳುಹಿಸಲಾದ ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸಿ ಕಳುಹಿಸಲಾದ ಅಭ್ಯರ್ಥಿಯ ನಾಲ್ಕು ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರಗಳ ಪೈಕಿ ಒಂದನ್ನು ಅನುಕಂಪದ ಆಧಾರದ ಮೇರೆಗೆ ನೇಮಕಾತಿ ರಿಜಿಸ್ಟರಿನಲ್ಲಿ ಅಂಟಿಸತಕ್ಕದ್ದು. ಮತ್ತೊಂದು ಭಾವ ಚಿತ್ರವನ್ನು ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಂಸ್ಥೆಯ ಮುಖ್ಯಸ್ಥರಿಗೆ ಕಳುಹಿಸಿ ಅಭ್ಯರ್ಥಿಯ ಸೇವಾ ಪುಸ್ತಕದಲ್ಲಿ ಅಂಟಿಸಲು ತಿಳಿಸುವುದು.
11. ಅನುಕಂಪದ ಆಧಾರದ ಮೇರೆಗೆ ನೇಮಕ ನೀಡುವ ಬಗೆಗಿನ ಸರ್ಕಾರಿ ಆದೇಶದಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಅಭ್ಯರ್ಥಿಯು ಪೂರೈಸಿರಬೇಕು.
12. ಅಭ್ಯರ್ಥಿಯು, ಅರ್ಜಿಯಲ್ಲಿ ಯಾವುದೇ ತಪ್ಪು ಮಾಹಿತಿ / ದಾಖಲೆಗಳನ್ನು ನೀಡಿ ನೇಮಕಾತಿ ಪಡೆದಿದ್ದಲ್ಲಿ ಅಭ್ಯರ್ಥಿಗೆ ಯಾವ ಮುನ್ಸೂಚನೆಯು ಇಲ್ಲದೆ ನೇಮಕಾತಿಯನ್ನು ರದ್ದುಪಡಿಸಲಾಗುವುದು.
13. ಅರ್ಜಿದಾರರು ಸಲ್ಲಿಸಿರುವ ಎಲ್ಲಾ ಮೂಲ ದಾಖಲಾತಿ ಪತ್ರಗಳು ಹಾಗೂ ಸಂಬಂಧಪಟ್ಟ ಎಲ್ಲಾ ಪೂರಕ ದಾಖಲೆಗಳ ನೈಜತೆ ಬಗ್ಗೆ ಪರಿಶೀಲಿಸಿ, ದೃಢೀಕರಿಸಿಕೊಂಡು ಪ್ರಥಮ ವೇತನ ಪ್ರಮಾಣ ಪತ್ರವನ್ನು ನೀಡುವುದು.
14. ಉಲ್ಲೇಖ [4]ರ ಸರ್ಕಾರದ ಆದೇಶದಂತೆ ಕಾಂಟ್ರಿಬ್ಯೂಟರಿ ಪೆನ್ಷನ್ ಬಗೆಗೆ ಸೂಕ್ತ ಕ್ರಮ ವಹಿಸುವುದು.
15. ನೇಮಕಾತಿ ಆದೇಶದ ವಿವರಗಳನ್ನು ಮೃತ ನೌಕರರ ಸೇವಾವಹಿಯಲ್ಲಿ ದಾಖಲಿಸಿ ದೃಢೀಕರಿಸುವುದು.
16. ಉಲ್ಲೇಖ [5], [7] ಮತ್ತು [8]ರ ಸರ್ಕಾರದ ಅಧಿಸೂಚನೆಗಳಂತೆ ಸರ್ಕಾರವು ನಿಗದಿಪಡಿಸಿರುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಅಭ್ಯರ್ಥಿಯು ಪಾಸು ಮಾಡತಕ್ಕದ್ದು. ಇಲ್ಲವಾದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.
17. ಅಭ್ಯರ್ಥಿಯು ಸೇವೆಗೆ ಸೇರಿದ ಒಂದು ವರ್ಷದೊಳಗೆ ಅಥವಾ ಸೇವೆಗೆ ಸೇರಿದ ದಿನಾಂಕದ ನಂತರ ಮುಗಿಯುವ ಆರ್ಥಿಕ ಸಾಲಿನ ಅಂತ್ಯಕ್ಕೆ ಕಛೇರಿಯ ಮುಖ್ಯಸ್ಥರಿಗೆ ಆಸ್ತಿ ಮತ್ತು ಋಣ ಪಟ್ಟಿಯನ್ನು ತಪ್ಪದೆ ಸಲ್ಲಿಸುವುದು.

**(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

(ಅರುಳ್ ಕುಮಾರ್)
ಜಂಟಿ ನಿರ್ದೇಶಕರು(ಆಡಳಿತ)

ಇವರಿಗೆ:

1. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, _ _ _ _ _ _ _ — _ _ _ _ ಜಿಲ್ಲೆ ಇವರಿಗೆ **ಶ್ರೀಮತಿ / ಶ್ರೀ / ಕುಮಾರಿ** ________________ ಇವರಿಗೆ ಅನುಕಂಪದ ಆಧಾರದ ಮೇರೆಗೆ ನೇಮಕಾತಿಗಾಗಿ ಉಲ್ಲೇಖ [3]ರ ಪ್ರಕಾರ ಜಿಲ್ಲಾ ಉಪ ನಿರ್ದೇಶಕರು ಈ ಕಛೇರಿಗೆ ಕಳುಹಿಸಿದ್ದ ದಿವಂಗತರ ಸೇವಾ ಪುಸ್ತಕವನ್ನು ಒಳಗೊಂಡ ಮೂಲ ಪ್ರಸ್ತಾವನೆಯನ್ನು ಮತ್ತು ಎಲ್ಲಾ ಮೂಲ ದಾಖಲೆಗಳನ್ನು ಯಥಾವತ್ತಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ. ಅಭ್ಯರ್ಥಿಯ ನೇಮಕಾತಿಯ ವಿವರವನ್ನು ದಿವಂಗತ ಸರ್ಕಾರಿ ನೌಕರರ ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು. ದಿವಂಗತ ಸರ್ಕಾರಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ದಿವಂಗತ ಸರ್ಕಾರಿ ನೌಕರರ ಸೇವಾ ಪುಸ್ತಕವನ್ನು ಕಳುಹಿಸಲು ತಿಳಿಸಿದೆ.
2. ಪ್ರಸ್ತಾವನೆಯನ್ನು ಸಲ್ಲಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ ಮಾಹಿತಿಗಾಗಿ.
3. ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
4. ಅಭ್ಯರ್ಥಿಯನ್ನು ನೇಮಕ ಮಾಡಿರುವ ಸಂಬಂಧಿಸಿದ ಕಛೇರಿ / ಸಂಸ್ಥೆಯ ಮುಖ್ಯಸ್ಥರಿಗೆ
5. ಸಂಬಂಧಿಸಿದ ಅಭ್ಯರ್ಥಿಗೆ.
6. ಸಂಬಂಧಿಸಿದ ಕಡತಕ್ಕೆ,
7. ಕಛೇರಿ ಪ್ರತಿ.
8. ಈ ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್ ವಿಳಾಸ www.schooleducation.kar.nic.in ರಲ್ಲಿ ಪ್ರಕಟಿಸಲಾಗಿದೆ.